# ಸ್ಪಾಮ್ ತಡೆಗೆ ಏರ್‌ಟೆಲ್ ಎಐ

ಏರ್‌ಟೆಲ್ ತನ್ನ ಬಳಕೆದಾರರಿಗಾಗಿ ಕೃತಕ ಬುದ್ಧಿಮತ್ತೆ (ಎಐ) ಆಧರಿತ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ. ಈ ಮೂಲಕ ಸ್ಪಾಮ್ ಕರೆಗಳ ತಡೆಗೆ ಕಡಿವಾಣ ಹಾಕುತ್ತಿದೆ. ಕಂಪನಿಯ ಹೇಳಿಕೆ ಪ್ರಕಾರ, ಇಂತಹದ್ದೊಂದು ಸೇವೆ ಒದಗಿಸುತ್ತಿರುವ ದೇಶದ ಮೊದಲ ಟೆಲಿಕಾಂ ಸಂಸ್ಥೆ ಏರ್‌ಟೆಲ್ ಆಗಿದೆ.

ಡಿಜಿಟಲ್ ಬಳಕೆಯ ವ್ಯಾಪ್ತಿ ವಿಸ್ತಾರಗೊಳ್ಳುತ್ತಿರುವಂತೆ ಮೊಬೈಲ್ ಬಳಕೆದಾರರಿಗೆ ಸ್ಪಾಮ್ ಕರೆಗಳು ಮತ್ತು ಸ್ಪಾಮ್ ಸಂದೇಶಗಳ ಕಾಟ ಗಣನೀಯವಾಗಿ ಹೆಚ್ಚುತ್ತಿದೆ. ಪ್ರತಿದಿನ ಹಲವಾರು ಸ್ಪಾಮ್ ಕರೆಗಳು ವಿವಿಧ ಹೆಸರುಗಳೊಂದಿಗೆ ಗ್ರಾಹಕರ ಮೊಬೈಲ್ ರಿಂಗಣಿಸುತ್ತಿವೆ. ಸಾಲ, ಆಫರ್‌ಗಳ ಹೆಸರಿನಲ್ಲಿ ಜನರನ್ನು ವಂಚಿಸುವ ಹುಸಿ ಕರೆಗಳು ಹೆಚ್ಚಾಗುತ್ತಿವೆ. ಈ ಸಮಸ್ಯೆಯಿಂದ ಮುಕ್ತಿಪಡೆಯಲು ಗ್ರಾಹಕರು ಸ್ಪಾಮ್ ಕರೆಗಳು ಹಾಗೂ ಸಂದೇಶಗಳನ್ನು ತಡೆಯುವ ಹಲವಾರು ಥರ್ಡ್ ಪಾರ್ಟಿ ಆ್ಯಪ್‌ಗಳ ಮೊರೆಹೋಗುತ್ತಿದ್ದಾಗಿಯೂ ಈ ಸಮಸ್ಯೆಗೆ ಮುಕ್ತಿ ಸಿಕ್ಕಿರಲಿಲ್ಲ. ಇದೀಗ ಏರ್‌ಟೆಲ್ ತನ್ನ ಬಳಕೆದಾರರಿಗಾಗಿ ಕೃತಕ ಬುದ್ಧಿಮತ್ತೆ ಆಧರಿತ ಸಾಧನದ ಮೂಲಕ ಈ ಸಮಸ್ಯೆ ಪರಿಹಾರಕ್ಕೆ ಮುಂದಾಗಿದೆ.

ಸ್ಪಾಮ್ ಕರೆಗಳ ಪತ್ತೆ ಮಾಡುವ ಆ್ಯಪ್‌ಗಳಲ್ಲಿ ಜನಪ್ರಿಯವಾಗಿರುವ ಟ್ರೂಕಾಲರ್‌ಗೆ ಪ್ರತಿಸ್ಪರ್ಧಿಯಾಗಿ ಈ ಸೇವೆಯನ್ನು ಏರ್‌ಟೆಲ್ ಜಾರಿಗೆ ತಂದಿದೆ ಎನ್ನಬಹುದು. ಇದಕ್ಕಾಗಿ ಗ್ರಾಹಕರು ಪ್ರತ್ಯೇಕ ಆ್ಯಪ್ ಡೌನ್‌ಲೋಡ್




**■ ಶಶಿಕುಮಾರ್ ಸಿ.**

ಮಾಡಬೇಕಿಲ್ಲ. ಏರ್‌ಟೆಲ್ ಸಿಮ್ ಬಳಕೆದಾರರಿಗೆ ಈ ಸೇವೆ ಸ್ವಯಂಚಾಲಿತವಾಗಿ ಲಭ್ಯವಾಗಲಿದ್ದು, ಇದರಿಂದ ಗ್ರಾಹಕರಿಗೆ ರಿಯಲ್ ಟೈಮ್‌ನಲ್ಲಿಯೇ ಸ್ಪಾಮ್ ಕರೆಗಳು ಮತ್ತು ಎಸ್‌ಎಮ್‌ಎಸ್ ಬಗ್ಗೆ ಎಚ್ಚರಿಕೆ ಸಿಗುತ್ತದೆ.

ಸ್ಪಾಮ್ ಕರೆಗಳಿಂದ ಉಂಟಾಗುವ ವಂಚನೆ ತಡೆಗೆ ಈ ತಂತ್ರಜ್ಞಾನ ಬಳಸಲಾಗುತ್ತದೆ ಎಂದಿರುವ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗೋಪಾಲ್ ವಿಟ್ಟಲ್, 'ಈ ತಂತ್ರಜ್ಞಾನವನ್ನು ಒಂದು ವರ್ಷದವರೆಗೆ ಪ್ರಾಯೋಗಿಕವಾಗಿಯೇ ಪರಿಶೀಲನೆಗೆ ಒಳಪಡಿಸಲಾಗುತ್ತದೆ ಹಾಗೂ ಆಯಾ ಕಾಲಕ್ಕೆ ಅಪ್‌ಡೇಟ್ ಮಾಡಲಾಗುತ್ತದೆ' ಎಂದಿದ್ದಾರೆ. ಪ್ರತಿದಿನ 100 ಮಿಲಿಯನ್ ಸ್ಪಾಮ್ ಕರೆಗಳು ಮತ್ತು 3 ಮಿಲಿಯನ್ ಸ್ಪಾಮ್ ಎಸ್‌ಎಂಎಸ್ ಅನ್ನು ಪತ್ತೆಹಚ್ಚಲು ಈ ತಂತ್ರಜ್ಞಾನ ನೆರವಾಗುತ್ತದೆ ಎಂದಿರುವ ಅವರು, ಈಗಾಗಲೇ 2 ಮಿಲಿಯನ್ ಸ್ಪಾಮರ್‌ಗಳನ್ನು (ಸ್ಪಾಮ್ ಕರೆ ಮತ್ತು ಸ್ಪಾಮ್ ಸಂದೇಶ ಕಳುಹಿಸುವರು) ನಿರ್ಬಂಧಿಸಲಾಗಿದೆ ಎಂದೂ ತಿಳಿಸಿದ್ದಾರೆ.

ಏರ್‌ಟೆಲ್‌ನ ಹೊಸ ತಂತ್ರಜ್ಞಾನದಲ್ಲಿ ಡ್ಯುಯಲ್ ಲೇಯರ್ ಪ್ರೊಟೆಕ್ಷನ್ ವ್ಯವಸ್ಥೆ ಇದೆ. ನೆಟ್‌ವರ್ಕ್ ಒಂದು ಲೇಯರ್‌ನಲ್ಲಿದ್ದರೆ, ಮತ್ತೊಂದರಲ್ಲಿ ಐಟಿ ಸಿಸ್ಟಮ್ಸ್ ಇದೆ. ಏರ್‌ಟೆಲ್‌ನ ಪ್ರತಿ ಕರೆ, ಎಸ್‌ಎಂಎಸ್ ಈ ಪ್ರೊಟೆಕ್ಷನ್ ವ್ಯವಸ್ಥೆಯಡಿ ಸಾಗಬೇಕಾಗುತ್ತದೆ. ಈ ಸಂದರ್ಭದಲ್ಲಿ ಸ್ಪಾಮ್ ಪತ್ತೆ ಕಾರ್ಯ ನಡೆಯುತ್ತದೆ. ಇದನ್ನು ಡ್ಯುಯಲ್ ಲೇಯರ್ಡ್ ಶೀಲ್ಡ್ ಎನ್ನಲಾಗುತ್ತದೆ. ಇದು ಪ್ರತಿದಿನ ಕೋಟ್ಯಂತರ ಸಂದೇಶಗಳು ಮತ್ತು ಕರೆಗಳನ್ನು ಪರಿಶೀಲಿಸುತ್ತದೆ.

ಎಸ್‌ಎಮ್‌ಎಸ್ ಮೂಲಕ ಕಳುಹಿಸಲಾದ ದುರುದ್ದೇಶಪೂರಿತ ಲಿಂಕ್‌ಗಳ ಬಗ್ಗೆ ಸಾಫ್ಟ್‌ವೇರ್ ಬಳಕೆದಾರರನ್ನು ಎಚ್ಚರಿಸುವ ಕಾರ್ಯ ಮಾಡುವ ಏರ್‌ಟೆಲ್ ಈ ತಂತ್ರಜ್ಞಾನ, ಬ್ಲಾಕ್ ಲಿಸ್ಟ್ ಮಾಡಲಾದ URLಗಳನ್ನು ಪ್ರತಿ ಎಸ್‌ಎಮ್‌ಎಸ್ ಕೇಂದ್ರೀಕೃತ ಡೇಟಾಬೇಸ್ ಮೂಲಕ ನೈಜ ಸಮಯದ ಆಧಾರದ ಮೇಲೆ ಸ್ಕ್ಯಾನ್ ಸಹ ಮಾಡುತ್ತದೆ. ■

## ಹೂಡಿಕೆಗೆ ಯುಪಿಐ 'ಫಂಡ್ ಬ್ಲಾಕಿಂಗ್'

ಷೇರು ಮಾರುಕಟ್ಟೆ ಹೂಡಿಕೆದಾರರು ಭವಿಷ್ಯದಲ್ಲಿ (ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್) ಮೂಲಕವೂ ಫಂಡ್ ಬ್ಲಾಕಿಂಗ್ ವ್ಯವಸ್ಥೆಯಡಿ ಸೇವೆ ಪಡೆಯಬಹುದು.

ಸೆಬಿಯ ನಿರ್ದೇಶಕರ ಮಂಡಳಿಯು ಈಚೆಗೆ ಈ ಪ್ರಸ್ತಾವನೆಗೆ ಅನುಮೋದನೆ ನೀಡಿದೆ. ಇದರನ್ವಯ, ಅರ್ಹ ಸ್ಟಾಕ್ ಬ್ರೋಕರ್‌ಗಳು ಮುಂದಿನ ವರ್ಷ ಫೆಬ್ರುವರಿ 1ರಿಂದ ತಮ್ಮ ಗ್ರಾಹಕರಿಗೆ ಯುಪಿಐ ಆಧಾರಿತ 'ಬ್ಲಾಕ್' ವ್ಯವಸ್ಥೆಯನ್ನು ಸೆಕೆಂಡರಿ ಮಾರುಕಟ್ಟೆಯಲ್ಲಿ (ನಗದು ವರ್ಗ) ಬಳಸಲು ಅನುಮತಿಸಬೇಕಾಗುತ್ತದೆ.

ಅರ್ಹ ಸ್ಟಾಕ್ ಬ್ರೋಕರ್‌ಗಳು ತಮ್ಮ ಗ್ರಾಹಕರಿಗೆ ಷೇರುಗಳ ಖರೀದಿ ಮತ್ತು ಮಾರಾಟಕ್ಕಾಗಿ ಯುಪಿಐ ಆಧರಿತ 'ಫಂಡ್ ಬ್ಲಾಕ್' ವ್ಯವಸ್ಥೆಯನ್ನು ಬಳಸಲು ಅನುಮತಿಸಲಿದ್ದಾರೆ. ಈ ಹೊಸ ವ್ಯವಸ್ಥೆಯು ಈಗಾಗಲೇ ಚಾಲ್ತಿಯಲ್ಲಿರುವ ಎಎಸ್‌ಬಿಎ (ಅಪ್ಲಿಕೇಷನ್ ಸಪೋರ್ಟೆಡ್ ಬೈ ಬ್ಯಾಂಕ್ ಅಕೌಂಟ್) ಸೌಲಭ್ಯದ ಮಾದರಿಯಲ್ಲೇ ಇರಲಿದೆ.

ಉಳಿತಾಯ ಖಾತೆ, ಡಿಮ್ಯಾಟ್ ಖಾತೆ ಮತ್ತು ವ್ಯಾಪಾರ ಖಾತೆಯ ಸೌಲಭ್ಯಗಳನ್ನು (ಈ ಮೂರು ಸೌಲಭ್ಯಗಳನ್ನು) ಒಟ್ಟಿಗೆ ವ್ಯಾಪಾರ ಖಾತೆಯಲ್ಲಿ ಒದಗಿಸಲಾಗುತ್ತದೆ. ಇಂತಹ ಖಾತೆಯಲ್ಲಿರುವ ಹಣಕ್ಕೆ ಗ್ರಾಹಕರು ಉಳಿತಾಯ ಖಾತೆಯಲ್ಲಿ ಪಡೆಯುವಂತೆ ಬಡ್ಡಿಯನ್ನು ಗಳಿಸಲಿದ್ದಾರೆ.

### ಮುಂಗಡ ಹಣ ಪಾವತಿ ಅನಗತ್ಯ

ಯುಪಿಐ ಫಂಡ್ ಬ್ಲಾಕ್ ವ್ಯವಸ್ಥೆಯಲ್ಲಿ, ಹೂಡಿಕೆದಾರರು ಮುಂಚಿತವಾಗಿ ಬ್ರೋಕರ್‌ಗೆ ಹಣವನ್ನು ಪಾವತಿಸುವ ಅಗತ್ಯವಿಲ್ಲ. ಅವರು ತಮ್ಮ ಬ್ಯಾಂಕ್ ಖಾತೆಗಳಲ್ಲಿ ನಿರ್ಬಂಧಿಸಲಾದ ಹಣವನ್ನು ಆಧರಿಸಿ ಸೆಕೆಂಡರಿ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಬಹುದು. ಅರ್ಹ ಸ್ಟಾಕ್ ಬ್ರೋಕರ್‌ಗಳ ಗ್ರಾಹಕರು ಟ್ರೇಡಿಂಗ್ ಸದಸ್ಯರಿಗೆ ಹಣವನ್ನು ವರ್ಗಾಯಿಸುವ ಮೂಲಕ ಅಸ್ತಿತ್ವದಲ್ಲಿರುವ ವ್ಯಾಪಾರ ಸೌಲಭ್ಯವನ್ನು ಮುಂದುವರಿಸಲು ಅಥವಾ ಹೊಸ ಸೌಲಭ್ಯವನ್ನು ಆರಿಸಿಕೊಳ್ಳುವ ಆಯ್ಕೆಯನ್ನು ಹೊಂದಿರುತ್ತಾರೆ. ವ್ಯಾಪಾರದ ಸದಸ್ಯರನ್ನು ಗಾತ್ರ ಮತ್ತು ಕಾರ್ಯಾಚರಣೆಗಳ ಪ್ರಮಾಣದ ಆಧಾರದ ಮೇಲೆ ಅರ್ಹ ಸ್ಟಾಕ್ ಬ್ರೋಕರ್‌ಗಳಾಗಿ ವರ್ಗೀಕರಿಸಲಾಗಿದೆ. ■